ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 11 ಬಿಎಲ್‌ಡಿ 2017
ಅಡಕ: .

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:08/06/2017.

## ಸುತ್ತೋಲೆ

ಇವರಿಗೆ,

ಪ್ರಿನ್ಸಿಪಾಲರು, ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳಿಗೆ.

ಮಾನ್ಯರೆ,

**ವಿಷಯ:** ಸಂಸ್ಥೆಗಳಲ್ಲಿನ ಮಹಿಳಾ ಶೌಚಾಲಯಗಳಿಗೆ ಅವಶ್ಯಕವಾಗಿರುವ ವಸ್ತುಗಳನ್ನು ಅಳವಡಿಸುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಪತ್ರ ಸಂಖ್ಯೆ : ಇಡಿ 008 ಟಿಜಿಎಲ್ 2017 ಭಾಗ-1, ದಿನಾಂಕ: 31/05/2017.

-------------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಉಲ್ಲೇಖಿತ ಪತ್ರದಲ್ಲಿ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಮಹಿಳಾ ಶೌಚಾಲಯಗಳಿಗೆ Automated Vending Machine, Supply of Quality and economical Sanitary Napkins & Supply of Incicerators ಗಳನ್ನು ಭಾರತ ಸರ್ಕಾರದ ಉದ್ದಿಮೆ ಹಾಗೂ ಅಧಿಕೃತ ಏಜೆನ್ಸಿಯವರಾದ ಮೆ:ಹೆಚ್.ಎಲ್.ಎಲ್ ಲೈಫ್ ಕೇರ್, ನೋಯ್ಡ ಇವರಲ್ಲಿ ಖರೀದಿಸಿ ಅಳವಡಿಸಲು ಸರ್ಕಾರದಿಂದ ಮಾರ್ಗದರ್ಶನ ಬಂದಿರುತ್ತದೆ.

ಈ ದಿಸೆಯಲ್ಲಿ ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ಮಹಿಳಾ ಶೌಚಾಲಯಗಳ ಸ್ವಚ್ಛತೆ, ಶುಚಿತ್ವದ ಹಾಗೂ ವಿದ್ಯಾರ್ಥಿನಿಯರ ಆರೋಗ್ಯದ ದೃಷ್ಟಿಯಿಂದ ಅವಶ್ಯಕವಾಗಿ ಬೇಕಾಗಿರುವ HLL Sanitary napkin Vending Machine, & HLL Sanitary napkin Incinerators ಗಳನ್ನು ಭಾರತ ಸರ್ಕಾರದ ಉದ್ದಿಮೆ ಹಾಗೂ ಅಧಿಕೃತ ಏಜೆನ್ಸಿಯವರಾದ ಮೆ:ಹೆಚ್.ಎಲ್.ಎಲ್ ಲೈಫ್ ಕೇರ್, ನೋಯ್ಡ ಇವರಲ್ಲಿ ಖರೀದಿಸಲು "ಸ್ವಚ್ಛ ಭಾರತ ಅಭಿಯಾನ್" ಅಡಿಯಲ್ಲಿ ಸಹಾಯಧನವನ್ನು [ಸಬ್ಸಿಡಿ] ನೀಡುತ್ತಿದ್ದಲ್ಲಿ, ಸದರಿ ಯೋಜನೆಯ ಸದುಪಯೋಗ ಪಡೆಯಲು ತಿಳಿಸಿ, ಕೆ.ಟಿ.ಪಿ.ಪಿ ನಿಯಮಾನುಸಾರ ಖರೀದಿಸಲು ಕ್ರಮ ವಹಿಸುವುದು.

ತಮ್ಮ ವಿಶ್ವಾಸಿ

ನಿರ್ದೇಶಕರು.
ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಪ್ರತಿ ಇವರಿಗೆ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು. ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬೆಂಗಳೂರು-ಇವರಿಗೆ ಮಾಹಿತಿಗಾಗಿ.
2) ಶ್ರೀ.ಪ್ರವೀಣ ಕುಮಾರ್ ಜಿ.ಎಲ್. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು- ಇವರಿಗೆ ಮಾಹಿತಿಗಾಗಿ.
3) ಇ-ಆಡಳಿತ ವಿಭಾಗಕ್ಕೆ- ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಚುರ ಪಡಿಸಲು.